3rd edition

ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-9 ಸಂಚಿಕೆ- 4 | ತ್ರೈಮಾಸಿಕ ಅಕ್ಟೋಬರ್–ಡಿಸೆಂಬರ್ 2022 | ಪುಟಗಳು-12



ಬೆವಿಕಂ
BESCOM

# ಬೆವಿಕಂನ ನಿಗಮ ಕಾರ್ಯಾಲಯದ ಆವರಣದಲ್ಲಿ 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೋಟಿಕಂಠ ಗಾಯನವನ್ನು ದಿನಾಂಕ 28.10.2022 ರಂದು ಆಚರಿಸಲಾಯಿತು











## ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ನುಡಿ



ಗ್ರಾಹಕರಿಗೆ ಅತ್ಯುತ್ತಮ ಸೇವೆ ನೀಡುವಲ್ಲಿ ತಮ್ಮೆಲ್ಲರ ಶ್ರಮ ಅಪಾರವಾದುದು. ಅತ್ಯಂತ ತಾಳ್ಮೆಯಿಂದ, ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುವ ನಿಟ್ಟಿನಲ್ಲಿ ದಣಿವಿಲ್ಲದೆ ಕಾರ್ಯ ನಿರ್ವಹಿಸುತ್ತಿರುವ ಬೆಸ್ಕಾಂನ ಎಲ್ಲಾ ಅಧಿಕಾರಿ ವರ್ಗದವರಿಗೂ, ಸಿಬ್ಬಂದಿಗಳಿಗೂ ಹೊಸ ವರ್ಷದ ಹಾಗೂ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ಬೆಸ್ಕಾಂನ **ಗ್ರಾಹಕ ಸ್ನೇಹಿ** ಸೇವೆಯ ನಡುವೆ, ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಕಡಿಮೆಗೊಳಿಸುವಲ್ಲಿ ಹೆಚ್ಚು ಗಮನಹರಿಸಬೇಕಾಗಿದ್ದು, ಗ್ರಾಹಕರ ಸ್ಥಾವರಗಳಿಗೆ ವ್ಯತ್ಯಯ ರಹಿತ ವಿದ್ಯುತ್ ಪೂರೈಕೆ ನೀಡುವ ಧ್ಯೇಯವನ್ನು ಸಹ ಸಾಕಾರಗೊಳಿಸುವಲ್ಲಿ ನಾವು ನೀವೆಲ್ಲರೂ ಹೆಚ್ಚಿನ ಶ್ರಮವಹಿಸಬೇಕಾಗಿದೆ.

ವಿದ್ಯುತ್ ಸರಬರಾಜು ನಿರ್ವಹಣೆಯ ನಡುವೆ, ಪವರ್‌ಮ್ಯಾನ್‌ಗಳ ಸಹಿತ ಬೆಸ್ಕಾಂನ ಎಲ್ಲಾ ಸಿಬ್ಬಂದಿಗಳು ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕಾದುದು ಅತ್ಯಂತ ಅವಶ್ಯವಾಗಿದೆ. ಮಳೆ, ಗಾಳಿಯಂತಹ ಪ್ರಕೃತಿ ವಿಕೋಪಗಳ ಸಮಯದಲ್ಲಿ ಹಾಗೂ ಕಂಬಗಳನ್ನು ಹತ್ತುವ ಸಮಯದಲ್ಲಿ ಪವರ್‌ಮ್ಯಾನ್‌ಗಳು ಅತ್ಯಂತ ಎಚ್ಚರಿಕೆ ವಹಿಸಿ, ಸುರಕ್ಷತಾ ಕ್ರಮಗಳನ್ನು ಅನುಸರಿಸುವುದರೊಂದಿಗೆ, ಗ್ರಾಹಕ ಸ್ನೇಹಿ ಸೇವೆಯ ಕಡೆಗಷ್ಟೇ ಅಲ್ಲದೇ, ತಮ್ಮ ಜೀವದ ಕುರಿತು ಎಚ್ಚರವಹಿಸುವಂತೆ ಈ ಮೂಲಕ ವಿನಂತಿಸುತ್ತೇನೆ.

ನಮ್ಮ ಬೆಸ್ಕಾಂನ **ಆನ್‌ಲೈನ್ ಸೇವೆಗಳು** ಜನತೆಯನ್ನು ಬಹಳ ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ತಮ್ಮೆಲ್ಲರ ಶ್ರಮ ಆದರಣೀಯ. ಆನ್‌ಲೈನ್ ವಿದ್ಯುತ್ ಬಿಲ್ ಪಾವತಿ ಕುರಿತು ಗ್ರಾಹಕರಲ್ಲಿ ಅರಿವು ಮೂಡಿಸುವುದಷ್ಟೇ ಅಲ್ಲದೇ, ಸೈಬರ್ ಕಳ್ಳತನದ ಕುರಿತಾದ ಜಾಗೃತಿ ಮೂಡಿಸಿ, ಗ್ರಾಹಕರಲ್ಲಿ ಆನ್‌ಲೈನ್ ಬಿಲ್ ಪಾವತಿಯ ಕುರಿತು ಅರಿವು ಮೂಡಿಸಲು ಶ್ರಮಿಸಬೇಕಿದೆ.

ಕಳೆದ ತಿಂಗಳುಗಳಿಂದ ಹಲವಾರು ಸಂಸ್ಥೆಗಳು ಹಾಗೂ ಗ್ರಾಹಕರಿಂದ ವಿದ್ಯುತ್ ಬಿಲ್ ಪಾವತಿ ಬಾಕಿಯಿದ್ದು, ಅದನ್ನು ಪರಿಣಾಮಕಾರಿಯಾಗಿ ವಸೂಲಾತಿ ನಡೆಸುವಲ್ಲಿ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾರ್ಯಪ್ರವೃತ್ತರಾಗಬೇಕಿದೆ. ಬೆಸ್ಕಾಂನ ವಿದ್ಯುತ್ ಬಿಲ್ ಮೊತ್ತದ ವಸೂಲಾತಿಯು ಬೆಸ್ಕಾಂನ ಯಶಸ್ಸಿನ ಒಂದು ಭಾಗವಾಗಿರುವುದರಿಂದ, ಅದರೆಡೆಗೆ ಹೆಚ್ಚಿನ ಶ್ರಮವನ್ನು ವಹಿಸಲು ತಾವೆಲ್ಲರೂ ಗಮನಹರಿಸಬೇಕಾಗಿದೆ.

ಬೆಸ್ಕಾಂನ ಸಂಪೂರ್ಣ ಯಶಸ್ಸಿನಲ್ಲಿ ತಮ್ಮ ಶ್ರಮ ಮತ್ತು ಸಮರ್ಪಣೆ ಬಹಳ ಪ್ರಮುಖವಾದುದು. ಮುಂದೆಯೂ ಕೂಡ ಬೆಸ್ಕಾಂನ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತಮ್ಮೆಲ್ಲರ ಸಹಕಾರ ಅತ್ಯಗತ್ಯವಾದುದು. ಆ ನಿಟ್ಟಿನಲ್ಲಿ ತಮ್ಮೆಲ್ಲರ ನಿರಂತರ ಸೇವೆ, ಸಹಕಾರವನ್ನು ಬಯಸುತ್ತಿದ್ದೇನೆ.

**ಮಹಾಂತೇಶ ಬೀಳಗಿ,** ಭಾ.ಆ.ಸೇ,
ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ

## ನಿರ್ದೇಶಕರು (ತಾಂತ್ರಿಕ) ರವರ ನುಡಿ



ಇಲಾಖೆ ಮತ್ತು ಇಲಾಖೇತರ ವಿದ್ಯುತ್ ಅವಘಡಗಳನ್ನು ತಡೆಯಲು ಬೆಸ್ಕಾಂ ಮುಂದಾಗಿದ್ದು, ಸುರಕ್ಷತಾ ಜಾಗೃತಿ ಅಭಿಯಾನವನ್ನು ಆಯೋಜಿಸಲು ಎಲ್ಲಾ ವಿಭಾಗಗಳು ಮತ್ತು ಉಪ ವಿಭಾಗಗಳಿಗೆ ಸೂಚನೆ ನೀಡಲಾಗಿದೆ. ಈಗಾಗಲೇ ಬೆಸ್ಕಾಂ ವಿಭಾಗೀಯ ಕಛೇರಿಗಳ ವ್ಯಾಪ್ತಿಗಳಲ್ಲಿ **"ನನ್ನ ಸುರಕ್ಷತೆ ನನ್ನ ಜವಾಬ್ದಾರಿ"** ಎಂಬ ಶೀರ್ಷಿಕೆ ಅಡಿಯಲ್ಲಿ ನವೆಂಬರ್-2022 ರ ಮಾಹೆಯಲ್ಲಿ ಹಮ್ಮಿಕೊಳ್ಳಲಾಯಿತು.

ಅದೇ ರೀತಿ ಶಾಲೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತಾ ಅಭಿಯಾನವನ್ನು ನಿರಂತರವಾಗಿ ಆಯೋಜಿಸಲು ಸುತ್ತೋಲೆ ಹೊರಡಿಸಲಾಗಿದ್ದು, ಗ್ರಾಮೀಣ ಭಾಗದ ಗ್ರಾಹಕರಿಗೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ನಮ್ಮ ಸಿಬ್ಬಂದಿ ಹೆಚ್ಚು ಗಮನ ಹರಿಸಬೇಕು, ಈ ನಿಟ್ಟಿನಲ್ಲಿ ನಮ್ಮ ಅಧಿಕಾರಿಗಳು ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಸುರಕ್ಷತೆ ಕುರಿತಂತೆ ಸ್ಪರ್ಧಾ ಕಾರ್ಯಕ್ರಮಗಳನ್ನು ಆಯೋಜಿಸಲು ಸೂಚಿಸಲಾಗಿದೆ. ಇದಕ್ಕೆ ಬೇಕಾದ ಅಗತ್ಯ ಸಲಕರಣೆಗಳ ಮತ್ತು ನೆರವನ್ನು ಪ್ರಧಾನ ವ್ಯವಸ್ಥಾಪಕರು ಗುಣಮಟ್ಟ, ಪ್ರಮಾಣಿತ ಮತ್ತು ಸುರಕ್ಷತೆ ಕಛೇರಿಯಿಂದ ಪಡೆಯಬೇಕು.

ಇತ್ತೀಚೆಗೆ ನಡೆದ **'ನನ್ನ ಸುರಕ್ಷತೆ ನನ್ನ ಜವಾಬ್ದಾರಿ'** ಸುರಕ್ಷತಾ ಜಾಗೃತಿ ಅಭಿಯಾನದ ಕರ್ತವ್ಯ ಸಂದರ್ಭದಲ್ಲಿ ಅಗತ್ಯ ಸುರಕ್ಷತಾ ಸಾಧನಗಳನ್ನು ಬಳಸಲು ಸಿಬ್ಬಂದಿಗೆ ಸೂಚನೆ ನೀಡಲಾಯಿತು.

**ಡಿ. ನಾಗಾರ್ಜುನ**
ನಿರ್ದೇಶಕರು (ತಾಂತ್ರಿಕ)

# ಎಸ್.ಸಿ/ಎಸ್.ಟಿ. ಬಿಪಿಎಲ್ ಕುಟುಂಬಗಳಿಗೆ 'ಅಮೃತ ಜ್ಯೋತಿ' ಆಸರೆ



**ಬೆಂಗಳೂರು : ಬಡತನ ರೇಖೆಗಿಂತ ಕೆಳಗಿರುವ ರಾಜ್ಯದ 36.20 ಲಕ್ಷ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಗ್ರಾಹಕರಿಗೆ ಪ್ರತಿ ತಿಂಗಳು 75 ಯೂನಿಟ್ ವರೆಗಿನ ಉಚಿತ ವಿದ್ಯುತ್ ನೀಡುವ 'ಅಮೃತ ಜ್ಯೋತಿ' ಯೋಜನೆ ಬೆಸ್ಕಾಂ ವ್ಯಾಪ್ತಿಯಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗುತ್ತಿದೆ.**

ರಾಜ್ಯ ಸರ್ಕಾರದ ಈ ಮಹತ್ವದ ಯೋಜನೆಯನ್ನು ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರು **ಡಾ. ಬಿ.ಆರ್. ಅಂಬೇಡ್ಕರ್ 115ನೇ ಜಯಂತಿ** ಯಂದು ಘೋಷಣೆ ಮಾಡಿದ್ದರು.

ಈ ಯೋಜನೆಗೆ **'ಅಮೃತ ಜ್ಯೋತಿ'** ಯೋಜನೆಯೆಂದು ರಾಜ್ಯ ಸರ್ಕಾರ ಆಗಸ್ಟ್ 16, 2022 ರಂದು ನಾಮಕರಣ ಮಾಡಿತ್ತು. ಎಲ್ಲಾ ಐದು ಎಸ್ಕಾಂಗಳ ವ್ಯಾಪ್ತಿಯಲ್ಲಿ ಯೋಜನೆಯನ್ನು ಏಕಕಾಲಕ್ಕೆ ಜಾರಿಗೊಳಿಸಲಾಯಿತು.

ಕುಟುಂಬ ಆಪ್ ನಲ್ಲಿ ಈಗಾಗಲೇ ನೋಂದಣಿಗೊಂಡಿರುವ ಬಿಪಿಎಲ್ ಕುಟುಂಬಗಳನ್ನು ಗುರುತಿಸಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅಮೃತಜ್ಯೋತಿ ಯೋಜನೆಗೆ ನೋಂದಣಿ ಮಾಡಿಕೊಳ್ಳ-ಲಾಗುತ್ತಿದೆ. ಬೆಸ್ಕಾಂ ಅಧಿಕಾರಿಗಳು ಮನೆ-ಮನೆಗೆ ಹೋಗಿ ನೋಂದಣಿ ಕಾರ್ಯವನ್ನು ಮಾಡುತ್ತಿದ್ದಾರೆ. ಅರ್ಹ ಗ್ರಾಹಕರು ತಮ್ಮ ಬಿಪಿಎಲ್ ಪಡಿತರ ಚೀಟಿ, ಆಧಾರ್ ಕಾರ್ಡ್ ಮತ್ತು ಜಾತಿ ಪ್ರಮಾಣ ಪತ್ರವನ್ನು ಒದಗಿಸಿ ಯೋಜನೆಗೆ ನೋಂದಣಿ ಮಾಡಿಕೊಳ್ಳಬೇಕು.

ನವೆಂಬರ್ 18, 2022 ರ ವೇಳೆಗೆ 2,41,818 ಎಸ್.ಸಿ./ಎಸ್.ಟಿ ಬಿಪಿಎಲ್ ಗ್ರಾಹಕರು ಯೋಜನೆಗೆ ನೋಂದಣಿ ಮಾಡಿಕೊಂಡಿದ್ದು, ಜೂನ್ ಮತ್ತು ಜುಲೈ ತಿಂಗಳಲ್ಲಿ ಗ್ರಾಹಕರು 75 ಯೂನಿಟ್‌ವರೆಗೆ ಬಳಸಿಕೊಂಡಿರುವ ಬಿಲ್ ಮೊತ್ತವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗಿದೆ. ಜೂನ್ ಮತ್ತು ಜುಲೈ ತಿಂಗಳ ಬಿಲ್ ಮೊತ್ತ 21.92 ಲಕ್ಷ ರೂ. ಗಳನ್ನು ಗ್ರಾಹಕರ ಖಾತೆಗಳಿಗೆ ವರ್ಗಾಯಿಸಲಾಗಿದೆ.

ಗ್ರಾಹಕರ ನೋಂದಣಿ ಕಾರ್ಯವನ್ನು ಬೆಸ್ಕಾಂ ನ ಆಯಾ ಉಪ ವಿಭಾಗಗಳ ಕಚೇರಿ, ಬೆಂಗಳೂರು ಒನ್ ಮತ್ತು ಗ್ರಾಮ ಒನ್ ಸೇವಾ ಕೇಂದ್ರಗಳಲ್ಲಿ ಮಾಡಿಕೊಳ್ಳಲಾಗುತ್ತಿದ್ದು, ಗ್ರಾಹಕರು ಇದರ ಸದುಪಯೋಗ ಪಡೆಯುವಂತೆ ಬೆಸ್ಕಾಂ ಅಧಿಕಾರಿಗಳು ಮನೆ-ಮನೆಗೆ ಹೋಗಿ ಅರಿವು ಮೂಡಿಸುತ್ತಿದ್ದಾರೆ.



ಎಸ್.ಸಿ/ಎಸ್.ಟಿ. ಬಿಪಿಎಲ್ ಗ್ರಾಹಕರ ಮಾಸಿಕ ಇಂಧನ ಬಳಕೆ 250 ಯೂನಿಟ್ ಒಳಗಡೆ ಇದ್ದರೆ ಮಾತ್ರ ಅಮೃತ ಜ್ಯೋತಿ ಯೋಜನೆಯ ಪ್ರಯೋಜನ ಪಡೆಯಲು ಅವರು ಅರ್ಹರಾಗಿರುತ್ತಾರೆ.

ನವೆಂಬರ್ ತಿಂಗಳ ಮೊದಲ ವಾರದಲ್ಲಿ ಬೆಸ್ಕಾಂನ ಚಿತ್ರದುರ್ಗ ವಲಯ ಕಛೇರಿ ವ್ಯಾಪ್ತಿಯಲ್ಲಿ 'ಅಮೃತ ಜ್ಯೋತಿ' ಯೋಜನೆ ಅನುಷ್ಠಾನ ಪ್ರಗತಿ ಸಭೆಯನ್ನು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಮಹಾಂತೇಶ ಬೀಳಗಿ** ನಡೆಸಿ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತ-ಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಸ್ಕಾಂ ಚಿತ್ರದುರ್ಗ ವಲಯ ಕಚೇರಿ ವ್ಯಾಪ್ತಿಯಲ್ಲಿ 78,000 ಎಸ್.ಸಿ./ಎಸ್.ಟಿ ಬಿಪಿಎಲ್ ಗ್ರಾಹಕರಿದ್ದು, ನವೆಂಬರ್ ತಿಂಗಳ ಮೊದಲ ವಾರದಲ್ಲಿ 20,000 ಫಲಾನುಭವಿಗಳ ದಾಖಲೆಗಳನ್ನು ಸೇವಾ ಸಿಂಧು ವೆಬ್ ಪೋರ್ಟಲ್‌ನಲ್ಲಿ ನೋಂದಾಯಿಸಿ ಯೋಜನೆ ಸೌಲಭ್ಯ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಬೆಸ್ಕಾಂ ಎಂ.ಡಿ. ಅವರಿಗೆ ಅಧಿಕಾರಿಗಳು ಮಾಹಿತಿ ನೀಡಿದರು.

ಫಲಾನುಭವಿಗಳ ಮನೆ ಬಾಗಿಲಿಗೆ ತೆರಳಿ, ದಾಖಲೆಗಳನ್ನು ಸೇವಾ ಸಿಂಧು ಪೋರ್ಟಲ್ ಗೆ ಸ್ಥಳದಲ್ಲೇ ದಾಖಲಿಸಬೇಕು. ಒಂದು ವೇಳೆ ಇಂಟರ್ ನೆಟ್ ಸಂಪರ್ಕ ಸಿಗದಿದ್ದಲ್ಲಿ, ನೆಟ್ ಸೌಲಭ್ಯ ಸಿಗುವ ಸ್ಥಳಕ್ಕೆ ಹೋಗಿ ಅಗತ್ಯ ದಾಖಲೆಗಳನ್ನು ನೋಂದಣಿ ಮಾಡಲು ಬೆಸ್ಕಾಂ ಎಂ.ಡಿ. ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಶೀಘ್ರವೇ ಫಲಾನುಭವಿಗಳ ದಾಖಲೆಗಳನ್ನು ಸೇವಾ ಸಿಂಧು ಪೋರ್ಟಲ್ ನಲ್ಲಿ ನೋಂದಣಿ ಮಾಡಲು ಉಪವಿಭಾಗವಾರು ತಂಡಗಳನ್ನು ರಚಿಸಲು ಅಧಿಕಾರಿಗಳಿಗೆ ಬೆಸ್ಕಾಂ ಎಂ.ಡಿ. ಸೂಚಿಸಿದರು.

ಬೆಸ್ಕಾಂ ಎಂಡಿ ಸ್ವತಃ ಎಸ್.ಸಿ/ಎಸ್.ಟಿ. ಬಿಪಿಎಲ್ ಗ್ರಾಹಕರ ಮನೆಗಳಿಗೆ ತೆರಳಿ 'ಅಮೃತ ಜ್ಯೋತಿ' ಯೋಜನೆಯ ಪ್ರಯೋಜನ ಪಡೆಯಲು ಮನವಿ ಮಾಡಿದರು.

# ಬೆಸ್ಕಾಂ ಸುರಕ್ಷತಾ ಅಭಿಯಾನ: 'ನನ್ನ ಸುರಕ್ಷತೆ ನನ್ನ ಜವಾಬ್ದಾರಿ'

ಬೆಸ್ಕಾಂನ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸುರಕ್ಷತಾ ಜಾಗೃತಿ ಅಭಿಯಾನವನ್ನು **'ನನ್ನ ಸುರಕ್ಷತೆ ನನ್ನ ಜವಾಬ್ದಾರಿ'** ಎಂಬ ಶೀರ್ಷಿಕೆ ಅಡಿಯಲ್ಲಿ ನವೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳಲಾಯಿತು.

ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರು (ತಾಂತ್ರಿಕ) ಅವರ ನಿರ್ದೇಶನದಂತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳನ್ನು ಇಂದಿರಾನಗರ, ಶಿವಾಜಿನಗರ, ವಿಧಾನಸೌಧ, ವೈಟ್‌ಫೀಲ್ಡ್ , ಹೆಬ್ಬಾಳ, ಮಲ್ಲೇಶ್ವರಂ, ಪೀಣ್ಯ, ಜಾಲಹಳ್ಳಿ, ಹೆಚ್.ಎಸ್. ಆರ್, ಜಯನಗರ, ಕೋರಮಂಗಲ, ಕೆಂಗೇರಿ, ರಾಜಾಜಿನಗರ, ಆರ್.ಆರ್. ನಗರ, ಹೊಸಕೋಟೆ, ರಾಮನಗರ, ಚಂದಾಪುರ, ಕನಕಪುರ, ಮಾಗಡಿ, ಚಿಕ್ಕಬಳ್ಳಾಪುರ, ಕೆಜಿಎಫ್, ಚಿಂತಾಮಣಿ, ತುಮಕೂರು, ತಿಪಟೂರು, ಮಧುಗಿರಿ, ಕುಣಿಗಲ್, ದಾವಣಗೆರೆ ಹಾಗು ಹರಿಹರ ವಿಭಾಗಳಲ್ಲಿ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಶಿವಾಜಿನಗರ ವಿಭಾಗದಲ್ಲಿ ನಡೆದ ಸುರಕ್ಷತಾ ಜಾಗೃತಿ ಅಭಿಯಾನದಲ್ಲಿ ನಿರ್ದೇಶಕರು (ತಾಂತ್ರಿಕ) ಡಿ. ನಾಗಾರ್ಜುನ ಅವರು ಭಾಗವಹಿಸಿ, ಸಿಬ್ಬಂದಿಗಳು ಅಗತ್ಯ ಸುರಕ್ಷತಾ ನಿಯಮಗಳನ್ನು ಪಾಲಿಸುವಂತೆ ಕಿವಿ ಮಾತು ಹೇಳಿದರು.

ಇಲಾಖೇತರ ವಿದ್ಯುತ್ ಅಪಘಾತಗಳಿಂದ ಸಾವು-ನೋವು ಸಂಭವಿಸುವುದಲ್ಲದೆ, ಬೆಸ್ಕಾಂ ವರ್ಚಸ್ಸಿಗೆ ಧಕ್ಕೆಯಾಗುತ್ತಿರುವ ಬಗ್ಗೆ ಜಾಗೃತಿ ಅಭಿಯಾನದಲ್ಲಿ ನೌಕರರಿಗೆ ಮನದಟ್ಟು ಮಾಡಲಾಯಿತು. ವಿದ್ಯುತ್ ಅಪಘಾತಗಳಿಂದ ಬೆಸ್ಕಾಂ ನೌಕರರ ಮಾನಸಿಕ ಮತ್ತು ದೈಹಿಕ ಧೈರ್ಯಕ್ಕೆ ಹಿನ್ನಡೆ ಉಂಟಾಗುತ್ತಿದ್ದು, ಅಪಘಾತ ರಹಿತ ಸಂಸ್ಥೆಯನ್ನಾಗಿ ಬೆಸ್ಕಾಂನ್ನು ರೂಪಿಸಲು ಎಲ್ಲಾ ನೌಕರರು ಮತ್ತು ಅಧಿಕಾರಿಗಳು ಶ್ರಮ ವಹಿಸಿ ಸುರಕ್ಷತಾ ನಿಯಮಗಳನ್ನು ಪಾಲಿಸಲು ಜಾಗೃತಿ ಅಭಿಯಾನದಲ್ಲಿ ಮನವರಿಕೆ ಮಾಡಲಾಯಿತು.

ಸುರಕ್ಷತೆಯೇ ಮೊದಲ ಆದ್ಯತೆ ಆಗಿರುವುದರಿಂದ ಎಲ್ಲಾ ವಿಭಾಗಗಳಲ್ಲಿ ಅಧಿಕಾರಿಗಳು ನಿರ್ವಹಣಾ ಸಿಬ್ಬಂದಿಗಳಿಗೆ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ, ಸುರಕ್ಷತಾ ಸಾಧನಗಳ ಬಳಕೆಯ ಮಹತ್ವದ ಬಗ್ಗೆ ಮತ್ತು ಸುರಕ್ಷತಾ ನಿಯಮಗಳನ್ನು ಪಾಲಿಸುವುದರ ಬಗ್ಗೆ ಜಾಗೃತಿ ಮೂಡಿಸಲು ಸುರಕ್ಷತಾ ಜಾಗೃತಿ ಕಾರ್ಯಕ್ರಮದಲ್ಲಿ ಸೂಚನೆ ನೀಡಲಾಯಿತು.













# ಸೂರಿನ ಮೇಲ್ಛಾವಣಿ ಗೆ ಮೆರಗು ನೀಡಲಿದೆ 'ಸೌರಗೃಹ' ಯೋಜನೆ

ಬೆಂಗಳೂರು : ಬೆಸ್ಕಾಂ ಗ್ರಾಹಕರ ಮನೆ ಬೆಳಗಲು ಬರಲಿದೆ **'ಸೌರಗೃಹ'** ಯೋಜನೆ. ಕೇಂದ್ರ ಸರ್ಕಾರದ ಈ ಮಹತ್ವದ ಯೋಜನೆಗೆ ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿದ್ದು, ಸದ್ಯದಲ್ಲೇ 'ಸೌರಗೃಹ' ಸೋಲಾರ್ ಘಟಕಗಳು ಬೆಸ್ಕಾಂ ಗ್ರಾಹಕರ ಸೂರಿನ ಮೇಲ್ಛಾವಣಿಗೆ ಮೆರಗು ನೀಡಲಿದೆ.

ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ಬೆಸ್ಕಾಂಗೆ 10 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ಗೃಹ ವಿದ್ಯುತ್ ಉತ್ಪಾದನೆಯನ್ನು ಹಂಚಿಕೆ ಮಾಡಿದ್ದು, 10 ಮೆಗಾ ವ್ಯಾಟ್ ಸಾಮರ್ಥ್ಯದಷ್ಟು ಸೋಲಾರ್ ಘಟಕಗಳನ್ನು ಗೃಹ ಬಳಕೆಯ (ಮನೆ ಮತ್ತು ಅಪಾರ್ಟ್‌ಮೆಂಟ್‌ಗಳ ಮೇಲ್ಛಾವಣಿ) ಸ್ಥಾವರಗಳ ಮೇಲೆ ಅಳವಡಿಸಲು ಕ್ರಮ ಕೈಗೊಂಡಿದ್ದು, ತನ್ನಲ್ಲಿ ನೋಂದಣಿಗೊಂಡಿರುವ ಏಜೆನ್ಸಿಗಳ ಮೂಲಕ ಬೆಸ್ಕಾಂ ಗ್ರಾಹಕರು ಸೋಲಾರ್ ಘಟಕಗಳನ್ನು ಅಳವಡಿಸಿಕೊಳ್ಳಲು ನೆರವಾಗುವ ಮಹತ್ವದ ಯೋಜನೆ ಇದಾಗಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಬರುವ ಗೃಹ ಬಳಕೆ ಗ್ರಾಹಕರು ಮಾತ್ರ ಯೋಜನೆಯ ಲಾಭ ಪಡೆಯಬಹುದಾಗಿದೆ. ಸೌರಗೃಹ ಯೋಜನೆಯ ಉಪಯೋಗ ಪಡೆಯುವ ಗ್ರಾಹಕರಿಗೆ ನಿಗದಿತ ವೆಚ್ಚದ ಮೇಲೆ ಕೇಂದ್ರ ಸರ್ಕಾರದಿಂದ ಶೇ.40 ರಿಂದ ಶೇ.20 ರಷ್ಟು ಸಹಾಯಧನ (ಸಬ್ಸಿಡಿ) ಸಹ ದೊರೆಯುತ್ತದೆ.

ಗರಿಷ್ಟ 3 ಕಿ.ವ್ಯಾ. ಸಾಮರ್ಥ್ಯದ ಸೋಲಾರ ಘಟಕಗಳಿಗೆ ಶೇ.40 ರಷ್ಟು ಸಹಾಯಧನ, 3 ಕಿ.ವ್ಯಾ ಸಾಮಾರ್ಥ್ಯಕ್ಕಿಂತ ಹೆಚ್ಚು ಮತ್ತು 10 ಕಿ.ವ್ಯಾ. ಸಾಮಾರ್ಥ್ಯದವರೆಗಿನ ಸೋಲಾರ ಘಟಕಗಳಿಗೆ ಶೇ.40 ಜತೆಗೆ ಶೇ.20 ರಷ್ಟು ಹೆಚ್ಚುವರಿ ಸಹಾಯಧನವನ್ನು ನೀಡಲು ನಿರ್ಧರಿಸಲಾಗಿದ್ದು, ಯೋಜನೆ ಜಾರಿಗೆ ಈಗಾಗಲೇ ಟೆಂಡರ್ ಅಂತಿಮಗೊಂಡಿದ್ದು, ಯೋಜನೆ ಜಾರಿಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.

ವಸತಿ ಸಮುಚ್ಛಯಗಳ ಮೇಲ್ಛಾವಣಿಗಳ ಸಾಮಾನ್ಯ ಸೌಲಭ್ಯಗಳಿಗೆ ಮಂಜೂರಾದ ಹೊರೆಯ 500 ಕಿ.ವ್ಯಾ (ಪ್ರತಿ ಮನೆಗೆ 10 ಕಿ.ವ್ಯಾ.) ಸಾಮರ್ಥ್ಯಕ್ಕೆ ಸೀಮಿತಗೊಳಿಸಿ ಈಗಾಗಲೇ ಅಳವಡಿಸಿರುವ ಸೋಲಾರ್ ಮೇಲ್ಛಾವಣಿ ಘಟಕದ ಸಾಮರ್ಥ್ಯ ಸೇರಿ ಶೇ.20% ಸಹಾಯಧನವನ್ನು ನೀಡಲು ಕೇಂದ್ರ ಸರ್ಕಾರ ನೀಡಲಿದೆ.

ಬೆಸ್ಕಾಂನಲ್ಲಿ ನೋಂದಣಿಗೊಂಡಿರುವ ಏಜೆನ್ಸಿಗಳು, ಯೋಜನೆಗೆ ಅರ್ಜಿ ಸಲ್ಲಿಸಿದ ಬೆಸ್ಕಾಂ ವ್ಯಾಪ್ತಿಯ ಗ್ರಾಹಕರ ಮನೆಗಳ ಮೇಲ್ಛಾವಣಿಗಳ ಮೇಲೆ ಸೋಲಾರ್ ವಿದ್ಯುತ್ ಘಟಕಗಳನ್ನು ಅಳವಡಿಸಿ 5 ವರ್ಷಗಳ ಅವಧಿಗೆ ನಿರ್ವಹಣೆ ಮಾಡಬೇಕಾಗಿರುತ್ತದೆ.

ಸೌರಗೃಹ ಯೋಜನೆಗೆ ಅರ್ಜಿ ಸಲ್ಲಿಸಲು ಬೆಸ್ಕಾಂ ವೆಬ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದೆ. ಗ್ರಾಹಕರು **https://bescom.karnataka.gov.in/** ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.

ಗ್ರಾಹಕರು ಅರ್ಜಿ ಸಲ್ಲಿಸಿದ ದಿನದಿಂದ ಸೋಲಾರ್ ವಿದ್ಯುತ್ ಘಟಕ ಕಾರ್ಯಾರಂಭ ಮಾಡುವವರೆಗಿನ ಎಲ್ಲ ಹಂತಗಳನ್ನು ಆನ್‌ಲೈನ್ ಮುಖಾಂತರ ವೀಕ್ಷಿಸಬಹುದಾಗಿರುತ್ತದೆ.

ಯೋಜನೆಯಡಿಯಲ್ಲಿ ಗ್ರಾಹಕರ ಮನೆಗಳ ಮೇಲ್ಛಾವಣಿಗಳ ಮೇಲೆ ಸೋಲಾರ್ ವಿದ್ಯುತ್ ಘಟಕಗಳನ್ನು ಅಳವಡಿಸಲು ಬೆಸ್ಕಾಂ ಏಜೆನ್ಸಿಗಳನ್ನು ನೊಂದಣಿ (ಎಂಪನೆಲ್ಮೆಂಟ್) ಮಾಡಿಕೊಂಡಿದೆ.

ವೆಬ್ ಪೋರ್ಟಲ್ ಮೂಲಕ ಗ್ರಾಹಕರಿಗೆ ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲು ಬೆಸ್ಕಾಂನಲ್ಲಿ ನೊಂದಾಯಿತಗೊಂಡಿರುವ ಯಾವುದಾದರು ಏಜೆನ್ಸಿಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿದೆ. ಗ್ರಾಹಕರು ತಾವು ಆಯ್ಕೆ ಮಾಡಿದ ಏಜೆನ್ಸಿಯ ಮುಖಾಂತರ ಸೋಲಾರ್ ವಿದ್ಯುತ್ ಘಟಕಗಳನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ.

**ಹಣ ಪಾವತಿ ವಿಧಾನ ಸರಳೀಕೃತ**: ಯೋಜನೆಗೆ ಅರ್ಜಿ ಸಲ್ಲಿಸಿರುವ ಗ್ರಾಹಕರು ಸಬ್ಸಿಡಿ ಮೊತ್ತವನ್ನು ಹೊರತುಪಡಿಸಿ ಉಳಿದ ಮೊತ್ತವನ್ನು ತಾವು ಆಯ್ಕೆ ಮಾಡಿದ ಏಜೆನ್ಸಿಗೆ ಪಾವತಿಸಬೇಕಾಗಿರುತ್ತದೆ.

ಸಬ್ಸಿಡಿ ಮೊತ್ತವನ್ನು ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ಬೆಸ್ಕಾಂಗೆ ಪಾವತಿಸಿದ ನಂತರ, ಬೆಸ್ಕಾಂ ವತಿಯಿಂದ ಏಜೆನ್ಸಿಗೆ ಪಾವತಿಸಲಾಗುತ್ತದೆ.

(7ನೇ ಪುಟಕ್ಕೆ.......)

ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ಫೆಬ್ರವರಿ 02, 2022 ಹಾಗು ಜೂನ್ 10, 2022 ರಂದು ಯೋಜನೆ ಜಾರಿಗೆ ಸರಳೀಕೃತ ವಿಧಾನದ ಅಳವಡಿಕೆಗಾಗಿ ಆದೇಶವನ್ನು ಹೊರಡಿಸಿರುತ್ತದೆ. ಸದರಿ ಆದೇಶದ ಅನ್ವಯ, ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲು ಉದ್ದೇಶಿಸಿರುವ ಗ್ರಾಹಕರು ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ಅಭಿವೃದ್ಧಿಪಡಿಸಿದ ವೆಬ್ ಪೋರ್ಟಲ್ **https://solarrooftop.gov.in** ಮುಖಾಂತರ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಕೇಂದ್ರ ಸರ್ಕಾರದ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಿದರೆ, ಸರ್ಕಾರದ ಸಹಾಯಧನ ನೇರವಾಗಿ ಗ್ರಾಹಕರ ಖಾತೆಗೆ ಹೋಗುತ್ತದೆ. ಬೆಸ್ಕಾಂ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿದರೆ ಬೆಸ್ಕಾಂ ಸಹಾಯಧನದ ಮೊತ್ತವನ್ನು ಏಜೆನ್ಸಿಗಳಿಗೆ ಪಾವತಿಸುತ್ತದೆ, ಗ್ರಾಹಕರು ಸಹಾಯಧನ ಮೊತ್ತವನ್ನು ಬಿಟ್ಟು, ಉಳಿದ ಹಣವನ್ನು ಏಜೆನ್ಸಿಗಳಿಗೆ ಪಾವತಿಸಬೇಕಾಗುತ್ತದೆ.

ಹಸಿರು ಇಂಧನ ಬಳಕೆ ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರವು 2022ರ ಅಂತ್ಯಕ್ಕೆ 100 ಗಿಗಾ ವ್ಯಾಟ್ (1 ಲಕ್ಷ ಮೆಗಾ ವ್ಯಾಟ್) ರಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆಯನ್ನು ಸೌರ ಶಕ್ತಿ ಮೂಲದಿಂದ ಉತ್ಪಾದಿಸುವ ಗುರಿಯನ್ನು ಹೊಂದಿದೆ. ಉದ್ದೇಶಿತ 100 ಗಿಗಾ ವ್ಯಾಟ್ ಸಾಮರ್ಥ್ಯದಲ್ಲಿ 40 ಗಿಗಾ ವ್ಯಾಟ್ (40000 ಮೆಗಾ ವ್ಯಾಟ್) ರಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆಯನ್ನು ಸೌರ ಮೇಲ್ಛಾವಣಿ ಘಟಕಗಳಿಂದ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ.

ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು, ಸೌರ ಮೇಲ್ಛಾವಣಿ ಘಟಕಗಳಿಂದ ಉತ್ಪಾದಿಸಲು ಉದ್ದೇಶಿಸಿರುವ 40 ಗಿಗಾ ವ್ಯಾಟ್ ಸಾಮರ್ಥ್ಯದಲ್ಲಿ 4 ಗಿಗಾ ವ್ಯಾಟ್ (4000 ಮೆಗಾ ವ್ಯಾಟ್) ನಷ್ಟು ವಿದ್ಯುತ್ತನ್ನು ಗೃಹ ಬಳಕೆಯ ಗ್ರಾಹಕರ ಮೇಲ್ಛಾವಣಿಗಳಿಂದ ಉತ್ಪಾದಿಸಲು ಉದ್ದೇಶಿಸಲಾಗಿದೆ..

ಗೃಹ ಬಳಕೆಯ ಸ್ಥಾವರಗಳಿಂದ ಉದ್ದೇಶಿತ 4 ಗಿಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಯ ಗುರಿಯನ್ನು ಸಾಧಿಸಲು ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ರಾಜ್ಯದ 5 ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಾಮರ್ಥ್ಯ ಹಂಚಿಕೆ ಮಾಡಿದೆ.

## ವಿದ್ಯಾರ್ಥಿ ಪ್ರತಿಭೆ



ಬೆವಿಕಂನ S-18 ಉಪವಿಭಾಗ,
ಚಿಕ್ಕಲ್ಲಸಂದ್ರದಲ್ಲಿ ಕಿರಿಯ ಸಹಾಯಕರಾಗಿ
ಕಾರ್ಯನಿರ್ವಹಿಸುತ್ತಿರುವ
ಶ್ರೀ ಆದಿನಾರಾಯಣಪ್ಪ ಜಿ. ರವರ ಮಗಳಾದ
**ಕುಮಾರಿ ಅಮೃತ ವೈ.ಎ** ರವರು ಎಸ್.ಎಸ್.ಎಲ್.ಸಿ ಯಲ್ಲಿ
ಶೇಕಡ 96.64% ಅಂಕಗಳನ್ನು ಪಡೆದಿರುತ್ತಾರೆ.



ಬೆವಿಕಂನ S-18 ಉಪವಿಭಾಗ,
ಚಿಕ್ಕಲ್ಲಸಂದ್ರದಲ್ಲಿ ಕಿರಿಯ ಸಹಾಯಕರಾಗಿ
ಕಾರ್ಯನಿರ್ವಹಿಸುತ್ತಿರುವ
ಶ್ರೀ ಆದಿನಾರಾಯಣಪ್ಪ ಜಿ. ರವರ ಮಗನಾದ
**ಮಾಸ್ಟರ್ ಅಭಿನಯ್ ವೈ.ಎ** ರವರು ದ್ವಿತೀಯ ಪಿಯುಸಿ ಯಲ್ಲಿ
ಶೇಕಡ 83.33 ಅಂಕಗಳನ್ನು ಪಡೆದಿರುತ್ತಾರೆ.

## ಹುಟ್ಟುಹಬ್ಬದ ಶುಭಾಶಯಗಳು

2022 ನೇ ವರ್ಷದ ಅಕ್ಟೋಬರ್–ಡಿಸೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು, ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2022 ನೇ ವರ್ಷದ ಅಕ್ಟೋಬರ್–ಡಿಸೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಗ್ರಾಹಕರ ಸಮಸ್ಯೆಗಳಿಗೆ ವಿದ್ಯುತ್ ಅದಾಲತ್‌ನಲ್ಲಿ ಸ್ಪಂದನೆ

ಗ್ರಾಮೀಣ ಭಾಗದ ಗ್ರಾಹಕರ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಪರಿಹಾರಕ್ಕಾಗಿ ಬೆಸ್ಕಾಂ ಅಧಿಕಾರಿಗಳು ಗ್ರಾಮೀಣ ಭಾಗಗಳಲ್ಲಿ **'ವಿದ್ಯುತ್ ಅದಾಲತ್'** ಗಳನ್ನು ನಡೆಸಿ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸುತ್ತಿದ್ದಾರೆ.

ಇದುವರೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ ಆರು ವಿದ್ಯುತ್ ಅದಾಲತ್‌ಗಳನ್ನು ನಡೆಸಲಾಗಿದ್ದು, ಬೆಸ್ಕಾಂ ನಿಗಮ ಕಚೇರಿಗಳ ಹಿರಿಯ ಅಧಿಕಾರಿಗಳು ವಿದ್ಯುತ್ ಅದಾಲತ್‌ಗಳಲ್ಲಿ ಭಾಗವಹಿಸಿ ಗ್ರಾಹಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ.



**ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ತಾಂತ್ರಿಕ), ನಿರ್ದೇಶಕರು (ಹಣಕಾಸು) ಮತ್ತು ಹಿರಿಯ ಅಧಿಕಾರಿಗಳು** ಅದಾಲತ್‌ನಲ್ಲಿ ಭಾಗವಹಿಸಿ ಗ್ರಾಹಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಸೂಚಿಸುತ್ತಿದ್ದಾರೆ.

ಪ್ರತಿ ತಿಂಗಳ **ಮೂರನೇ ಶನಿವಾರ** ದಂದು ವಿದ್ಯುತ್ ಅದಾಲತ್‌ಗಳನ್ನು ಬೆಸ್ಕಾಂನ ಆಯ್ದ ಹಳ್ಳಿಗಳಲ್ಲಿ ನಡೆಸಲಾಗುತ್ತಿದೆ. ಜೂನ್ ತಿಂಗಳಲ್ಲಿ ಮೊದಲ ವಿದ್ಯುತ್ ಅದಾಲತ್‌ನ್ನು ಏರ್ಪಡಿಸಲಾಗಿತ್ತು. ಗ್ರಾಮೀಣ ಭಾಗದ ಗ್ರಾಹಕರ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ, **ಶ್ರೀ ಸುನಿಲ್ ಕುಮಾರ್** ಅವರು ವಿದ್ಯುತ್ ಅದಾಲತ್‌ಗಳನ್ನು ಆಯೋಜಿಸಲು ಎಲ್ಲಾ ಎಸ್ಕಾಂಗಳಿಗೆ ಸೂಚಿಸಿದ್ದರು. ವಿದ್ಯುತ್ ಅದಾಲತ್‌ಗಳಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಪ್ರತಿ ಅದಾಲತ್‌ನಲ್ಲಿ ಸರಾಸರಿ 2500 ರಿಂದ 2700 ಗ್ರಾಹಕರು ಅದಾಲತ್‌ನಲ್ಲಿ ಭಾಗವಹಿಸುತ್ತಿದ್ದಾರೆ.

ಬೆಸ್ಕಾಂ ವ್ಯಾಪ್ತಿಯ 541 ಹಳ್ಳಿಗಳಲ್ಲಿ ಅದಾಲತ್‌ಗಳನ್ನು ನಡೆಸಲಾಗಿದೆ. ಒಟ್ಟು 16486 ಗ್ರಾಹಕರು ಪಾಲ್ಗೊಂಡಿದ್ದು, ಇದುವರೆಗೆ 5937 ಮನವಿಗಳನ್ನು ಸ್ವೀಕರಿಸಲಾಗಿದೆ. ಅದಾಲತ್ ನಡೆದ ದಿನದಂದೇ 1933 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದ್ದು, ನಂತರದ ದಿನಗಳಲ್ಲಿ 1768 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ. ಒಟ್ಟು ಇತ್ಯರ್ಥಪಡಿಸಿರುವ ದೂರುಗಳ ಸಂಖ್ಯೆ 3701. ಇನ್ನು 2236 ದೂರುಗಳು ಇತ್ಯರ್ಥಕ್ಕೆ ಬಾಕಿ ಉಳಿದಿದ್ದು, ಇದರಲ್ಲಿ 691 ದೂರುಗಳನ್ನು ಸ್ಥಳೀಯವಾಗಿ ಇತ್ಯರ್ಥಪಡಿಸಲು ಸೂಚಿಸಲಾಗಿದೆ. ಉಳಿದ 1545 ದೂರುಗಳನ್ನು ಮೇಲಾಧಿಕಾರಿಗಳಿಗೆ ರವಾನಿಸಲಾಗಿದೆ. ಬೆಸ್ಕಾಂ ವಿದ್ಯುತ್ ಅದಾಲತ್‌ಗೆ ಗ್ರಾಮೀಣ ಭಾಗದ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ವಿದ್ಯುತ್ ಅದಾಲತ್‌ಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಗ್ರಾಹಕರಿಗೆ ಮುಂಚಿತವಾಗಿ ಅರಿವು ಮೂಡಿಸುವ ಕೆಲಸ ನಡೆಯುತ್ತಿದೆ. ಬೆಸ್ಕಾಂನ ಅಧಿಕಾರಿಗಳು ಕರ ಪತ್ರಗಳನ್ನು ಹಂಚುವ ಮೂಲಕ ವಿದ್ಯುತ್ ಅದಾಲತ್‌ಗಳು ನಡೆಯುವ ಸ್ಥಳದ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡುತ್ತಿದ್ದಾರೆ.







# ಸಾಧನ ಪ್ರಶಸ್ತಿ

**ಶ್ರೀ ಪ್ರಸನ್ನ ಕುಮಾರ್ ಪಿ.ಎಂ.**
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹ&ವಾ)
ಖರೀದಿ ಶಾಖೆ, ನಿಗಮ ಕಾರ್ಯಾಲಯ,
ಬೆವಿಕಂ, ಬೆಂಗಳೂರು.
ಮೊ : 8050768230

**ಬೆ. ವಿ. ಕಂ. ನ ಖರೀದಿ ಶಾಖೆಯಲ್ಲಿ ಲೆಕ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಸನ್ನ ಕುಮಾರ್ ಪಿ.ಎಂ ರವರ ಸಮಾಜ ಸೇವೆಯನ್ನು ಗುರುತಿಸಿ ತುಮಕೂರು-ಬೆಂಗಳೂರು ಪ್ರಯಾಣಿಸುವ ರೈಲ್ವೆ ಪ್ರಯಾಣಿಕರ ವೇದಿಕೆಯಿಂದ 67 ನೇ 'ಕನ್ನಡ ರಾಜ್ಯೋತ್ಸವ' ಪ್ರಯುಕ್ತ ಸಾಧನ ಪ್ರಶಸ್ತಿಯನ್ನು ನೀಡಿರುತ್ತಾರೆ.**

**ಶ್ರೀ ಪ್ರಸನ್ನ ಕುಮಾರ್ ಪಿ.ಎಂ** ರವರು ದಿನಾಂಕ 22.07.1965 ರಂದು ಪೂಜಾರಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆಯಲ್ಲಿ ಜನಿಸಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಧುಗಿರಿಯಲ್ಲಿಯೂ, ಕಾಲೇಜು ಶಿಕ್ಷಣವನ್ನು ತುಮಕೂರಿನಲ್ಲಿ ಮುಗಿಸಿ, 1985 ರಲ್ಲಿ ಬಿ.ಕಾಂ ಪದವಿ ಪಡೆದು, ಕೆ.ಇ.ಬಿ.ಯಲ್ಲಿ ಸಹಾಯಕ ಹುದ್ದೆಗೆ ದಿನಾಂಕ 12.05.1986 ರಂದು ಕೆಲಸಕ್ಕೆ ಸೇರಿ, ಪ್ರಸ್ತುತ ಲೆಕ್ಕಾಧಿಕಾರಿಯಾಗಿ, ಬೆವಿಕಂ, ಕಂಪನಿ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ.

**ಅವರ ಸಮಾಜಮುಖಿ ಕಾರ್ಯಗಳು ಈ ಕೆಳಗಿನಂತಿದೆ:**

1. 2002 ರಲ್ಲಿ 10 ದಿನಗಳ ಕಾಲ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಮತ್ತು ತುಮಕೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ರಾಜ್ಯವ್ಯಾಪ್ತಿಯಲ್ಲಿ ಪ್ರವಾಸ ಮಾಡಿ ಪ್ರಚಾರ ಮಾಡಲು ಮತ್ತು ಪರಿಸರ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿರುತ್ತಾರೆ.
2. 2002 ರಿಂದ 2006 ರವರೆಗೆ ಮಧುಗಿರಿ ತಾಲ್ಲೂಕು ನೌಕರರ ವೀರಶೈವ ಸಮಾಜದಲ್ಲಿ ಜಂಟಿ ಕಾರ್ಯದರ್ಶಿ ಮತ್ತು ಸಂಘಟನಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ.
3. 2003 ರಿಂದ 2010 ರವರೆಗೆ ಮಧು ಪತ್ತಿನ ಸಹಕಾರ ಸಂಘ (ರಿ) ಮಧುಗಿರಿಯ ಕೋ ಆಪರೇಟಿವ್ ಸೊಸೈಟಿನಲ್ಲಿ ಅಧ್ಯಕ್ಷರಾಗಿ ಮತ್ತು ನಿರ್ದೇಶಕರಾಗಿ ಒಟ್ಟು 7 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ಇವರ ಅವಧಿಯಲ್ಲಿ ಸದರಿ ಸಹಕಾರ ಸಂಘವು ಅಭಿವೃದ್ಧಿಯ ಪಥದಲ್ಲಿ ಮುನ್ನಡೆದಿರುತ್ತದೆ.
4. ಶ್ರೀಯುತರ ಸಾಮಾಜಿಕ ಕಳಕಳಿಯ ಪರಿಕಲ್ಪನೆಯಾಗಿ 2004 ರಲ್ಲಿ **"ವಿಶ್ವಬಂಧು ಟ್ರಸ್ಟ್ (ರಿ)"** ಸ್ಥಾಪಿಸಿ, 2007 ರವರೆಗೆ ಅದರ ಅಧ್ಯಕ್ಷರಾಗಿ ಹಲವಾರು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡು ಸಮಾಜದ ಅಭಿವೃದ್ಧಿಗೆ ಅವರದೇ ಆದ ಕೊಡುಗೆ ನೀಡಿರುತ್ತಾರೆ.
5. ಹಾಲಿ ಚಾಲ್ತಿಯಲ್ಲಿರುವ ಇವರ ಮತ್ತೊಂದು ಸಮಾಜಮುಖಿ ಪರಿಕಲ್ಪನೆಯಾದ ಶಾಲಾ/ಕಾಲೇಜು ವಿದ್ಯಾರ್ಥಿಗಳ ಭವಿಷ್ಯದ ಮಾರ್ಗದರ್ಶನ ನೀಡುವ ಸಲುವಾಗಿ **"ವಿಶ್ವಚೇತನ ಪ್ರತಿಷ್ಠಾನ ತುಮಕೂರು"** ಎನ್ನುವ ಸಂಸ್ಥೆಯನ್ನು 2009 ರಲ್ಲಿ ನೂತನವಾಗಿ ಪ್ರಾರಂಭಿಸಿ, **"ನಿನ್ನ ಭವಿಷ್ಯ ನಿನ್ನ ಕೈಲಿದೆ"** ಅಥವಾ **"ನಿನ್ನ ಬಾಳಿನ ಶಿಲ್ಪಿ ನೀನೇ"** ಎನ್ನುವ ಶೀರ್ಷಿಕೆಯಡಿಯಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು 2009 ರಿಂದ ಇಲ್ಲಿಯವರೆಗೆ ಸುಮಾರು 170 ಕಾರ್ಯಕ್ರಮಗಳನ್ನು ನಡೆಸಿ ಸುಮಾರು 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕಾರಣರಾಗಿರುತ್ತಾರೆ.
6. ಇವರ ಮತ್ತೊಂದು ಮೈಲಿಗಲ್ಲು ಅಂದರೆ 2017-18, 2018-19 ನೇ ಸಾಲಿನಲ್ಲಿ ಸಿದ್ಧರ ಬೆಟ್ಟ ರೋಟರಿ ಕ್ಲಬ್‌ನಲ್ಲಿ ಸಕ್ರಿಯ ಸದಸ್ಯರು ಮತ್ತು ನಿರ್ದೇಶಕರಾಗಿ ಹಲವಾರು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.
7. ಶ್ರೀಯುತರ ಮೇಲಿನ ಕಾರ್ಯಗಳನ್ನು ಗಮನಿಸಿ ತುಮಕೂರು-ಬೆಂಗಳೂರು ಪ್ರಯಾಣಿಸುವ ರೈಲ್ವೆ ಪ್ರಯಾಣಿಕರ ವೇದಿಕೆಯಿಂದ 67 ನೇ 'ಕರ್ನಾಟಕ ರಾಜ್ಯೋತ್ಸವ' ಪ್ರಯುಕ್ತ ಸಾಧನ ಪ್ರಶಸ್ತಿಯನ್ನು ನೀಡಿರುತ್ತಾರೆ.

   ಶ್ರೀಯುತರು ಬೆವಿಕಂ ನಲ್ಲಿ ಉನ್ನತ ಹುದ್ದೆಯಲ್ಲಿದ್ದು, ಕಚೇರಿಯ ಬಿಡುವಿನ ವೇಳೆಯಲ್ಲಿ ಸಮಾಜಮುಖಿಯಾದ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಸಮಾಜದ ಅಭಿವೃದ್ಧಿಗೆ ಹಾಗೂ ಶಾಲಾ/ಕಾಲೇಜು ವಿದ್ಯಾರ್ಥಿಗಳ ಭವಿಷ್ಯಕ್ಕೆ ನೆರವಾಗುವಂತಹ ಕಾರ್ಯಗಳನ್ನು ಮಾಡುತ್ತಿರುವುದರಿಂದ ಬೆಸ್ಕಾಂ ಸ್ನೇಹಿ ಇವರ ಸಮಾಜಸೇವೆಯನ್ನು ಶ್ಲಾಘಿಸುತ್ತದೆ ಹಾಗೂ ಇವರ ಕಾರ್ಯಗಳು ಇತರರಿಗೂ ಮಾರ್ಗದರ್ಶನವಾಗಲಿ ಎಂದು 'ಬೆಸ್ಕಾಂ ಸ್ನೇಹಿ' ಹಾರೈಸುತ್ತದೆ.

# ಯಾಣದ ಪ್ರಯಾಣ

..........ಹಿಂದಿನ ಸಂಚಿಕೆಯಿಂದ ಮುಂದುವರಿದುದು

ಈ ಮೆಚ್ಚುಗೆಯ ಭಾವದಲ್ಲೇ ಆತುರಾತುರವಾಗಿ ಬಂದು ಎರಡರಲ್ಲಿ ಒಂದಾದ ಪರ್ವತದ ಉದರದಲ್ಲಿದ್ದ ದೇಗುಲಕ್ಕೆ ಬಂದು ನಿಂತೆವು. ಅಷ್ಟರಲ್ಲಿ ಬಂದ ನಮ್ಮ ಉಳಿದ ಗೆಳೆಯರಂತೆಯೇ ನಾನೂ ಮೊದಲು ಮಾಡಿದ ಕೆಲಸವೇ ಮೈಮೇಲಿದ್ದ ಜಿಗಣೆಗಳ ಹುಡುಕಾಟ. ಕೆಲವರು ಸಧ್ಯ ಉಳಿದುಕೊಂಡೆ ಎಂದು ನಿಟ್ಟುಸಿರುಬಿಟ್ಟರು. ಕೆಲವರು ಹತ್ತಿದ್ದ ಜಿಗಣೆಗಳನ್ನು ಹಾಗೆಯೇ ಕೊಡವಿ ಹಾಕಿದರು. ಆದರೆ ಇನ್ನೂ ಕೆಲವರು ಸಮಾಧಾನವಾಗದೆ shoe, ಪ್ಯಾಂಟ್ ಬಿಚ್ಚಿ ನೋಡಿ ಚಿಟ್ಟನೆ ಚೀರಿಕೊಂಡರು. ಅವರು ಅಲ್ಲಿ ಕಂಡದ್ದು ತನ್ನದೇ ಕಾಲಿಗೆ ನಾಲ್ಕೈದು ಜಿಗಣೆಗಳು ಹೇಗೆ ಒಳಗೆ ಹೋದವೋ ಗೊತ್ತಿಲ್ಲ, ರಕ್ತ ಹೀರುತ್ತಲಿದ್ದವು. 'Help' 'Help' ಎಂದು ಕೂಗಾಡಿ ಹೇಗೋ ಬಿಡಿಸಿಕೊಂಡರು. ಆಗ ನಮ್ಮ ಕಣ್ಣೆದಿರಿಗೆ ಕಂಡ ದೃಶ್ಯವೆಂದರೆ ಜಿಗಣೆಯು ಕೆಳಗೆ ಬಿದ್ದ ಮೇಲೆ Bleeding ಆಗುತ್ತಲೇ ಇರುತ್ತದೆ. ಬಹಳ ಹೊತ್ತಿನವರೆಗೆ Blood clot ಆಗುವುದೇ ಇಲ್ಲ. ಅದು ರಕ್ತ ಹೀರುವಾಗ anti-clotting solution ಸ್ರವಿಸುತ್ತದೆಂದೂ, ಅದಕ್ಕಾಗಿಯೇ clot ಆಗುವುದಿಲ್ಲವೆಂದೂ ತಿಳಿದುಕೊಂಡೆ.



ಕೆಲವರು ಇಂತಹ ಪರಿಸ್ಥಿತಿಯನ್ನು ನೋಡಿ ಎಲ್ಲರಿಗೂ ಅನುಮಾನ ಬಂದು shoe, pant ನ್ನು ಕಳಚಿ ಹಾಕಿದರು. ಆಶ್ಚರ್ಯವೆಂಬಂತೆ ಎಲ್ಲರೂ ಒಂದಿಲ್ಲ ಒಂದು ಜಿಗಣೆಗೆ ಆಹಾರವಾಗಿದ್ದರು. ಅದನ್ನು ಕಂಡ ನಮ್ಮ ಗುಂಪಿನಲ್ಲಿ ಹಾಹಾಕಾರವೆದ್ದಿತು. ಅನುಮಾನಕ್ಕೆ ಆಸ್ಪದ ಕೊಡದೆ ನಾನು shoe ಕಳಚಿದಾಗ ಕಂಡ ದೃಶ್ಯ ಕಂಡು ಎದೆ ನಡುಗಲಾರಂಭಿಸಿತು. Socks ಬಿಚ್ಚಿದಾಕ್ಷಣ ಮೂರು Leech ಗಳು ನನ್ನ ರಕ್ತವನ್ನು ಲೀಲಾಜಾಲವಾಗಿ ಹೀರುತ್ತಿದ್ದುದು ಕಂಡು ಬಂತು. ನನ್ನೊಳಗೆ ನಾನೇ ಧೈರ್ಯ ತಂದುಕೊಂಡು ಅವನ್ನು ಕೀಳಲು salt packet ತೆಗೆದುಕೊಂಡೆ. ಒಂದಂತೂ ಆಗಲೇ ರಕ್ತ ಹೀರಿ ನಾಲ್ಕರಷ್ಟು ದಪ್ಪವಾಗಿತ್ತು. ಒಂದೊಂದಾಗಿ ಎಲ್ಲವನ್ನು ಕಳಚಿ ಬೀಳಿಸಿದೆ. ರಕ್ತ ಇನ್ನೂ ಸೋರುತ್ತಲೆ ಇತ್ತು. ಸಂತೋಷದ ವಿಷಯವೆಂದರೆ ರಕ್ತ ಹೀರುವಾಗ ಸ್ವಲ್ಪವೂ ನೋವಾಗದಂತೆ ಎಚ್ಚರಿಕೆ ವಹಿಸಿರುತ್ತದೆ ಈ ಜಿಗಣೆ. ಒಂದು ವೇಳೆ ನೋವಾಗುತ್ತಿದ್ದರೆ ಹೊಯ್ದಾಟವೇ ಪ್ರಾರಂಭಿಸಬೇಕಾಗುತ್ತಿತ್ತು. ಎಲ್ಲರೂ ಅಲ್ಲಿರುವ Leech first Aid ನಿಂದ ಉಪಯೋಗ ಪಡೆದುಕೊಂಡು, ದೇವರದರುಶನ ಮಾಡಿಕೊಂಡೆವು. ಯಾವುದೇ Leech ನಿಂದ ಕಡಿಸಿಕೊಳ್ಳದ ಒಂದಿಬ್ಬರು ದೇವರಿಗೆ ಧನ್ಯವಾದಗಳನ್ನರ್ಪಿಸಿದರು. ನಮ್ಮಲಿರುವ ಕ್ಯಾಮರಾಗಳಲ್ಲಿ ಅಲ್ಲಿಯ ಸುಂದರ ಪರಿಸರದ, ನಿಸರ್ಗದ ಕಲಾತ್ಮಕತೆಯನ್ನು ಸೆರೆಹಿಡಿದೆವು. ನಂತರ ಬೆಟ್ಟವನ್ನು ಹತ್ತುವ ಕಾರ್ಯಕ್ರಮವಿತ್ತು.

ಬೆಟ್ಟ ಹತ್ತುವುದೆಂದರೆ ಎಲ್ಲಿಯವರೆಗೆ ಹೋಗಿ ಬರಲು ಸಾಧ್ಯವೋ ಅಲ್ಲಿಗೆ ಹೋಗಿ ನೋಡಿದೆವು. 'ನಮ್ಮೂರ ಮಂದಾರ ಹೂವೇ' ಕನ್ನಡ ಚಿತ್ರದಲ್ಲಿ ನಾಯಕ-ನಾಯಕಿಯರು ಸುತ್ತಿದಲ್ಲೆಲ್ಲ ಸುತ್ತಿ ಆನಂದಿಸಿದೆವು. ಪ್ರತಿಧ್ವನಿ ಕೊಡುವ ಗುಹೆಯಾಕಾರದ ಸ್ಥಳದಲ್ಲಿ "ಸುಮಾ... ಪ್ರತಿಮಾ... ಎಲ್ಲಿರುಷೆ" ಎಂದು ಕೂಗಿ, ಕೂಗಿ ಉತ್ತರ ಬಾರದೆ ಸುಮ್ಮನಾದೆನು. ಆ ರಮಣೀಯ ಬೆಟ್ಟದ ಹೊಟ್ಟೆಯಲ್ಲೆಲ್ಲಾ ತಿರುಗಾಡುವ ಹಾಗೆ ನಿಂತಿದೆ ಆ ಕಲ್ಲು ಬಂಡೆಗಳು. ದೊಡ್ಡ ಹೆಬ್ಬಂಡೆಗಳ ಚಪ್ಪಟೆಯಾದ ತುಂಡುಗಳನ್ನು ಒಂದು ಕೇಂದ್ರ ಸ್ಥಳದ ಸುತ್ತಮುತ್ತಲೂ ವೃತ್ತಾಕಾರದಲ್ಲಿಯೋ, ಅಂಡಾಕಾರದಲ್ಲಿ ಕಾಣುವಂತೆ ಮಾಡುವ ಪ್ರಯತ್ನದಲ್ಲಿಯೋ, ಆಯತಾಕಾರದ ಪ್ರಯತ್ನದಲ್ಲಿಯೋ, ತ್ರಿಭುಜಾಕಾರ ಪ್ರಯತ್ನದಲ್ಲಿಯೋ ನೆಟ್ಟ ಹಾಗೆ ಕಾಣುತ್ತದೆ. ಆ ಹೆಬ್ಬಂಡೆಗಳು ಹಾಗೆಯೇ ನಿಂತು ಒಂದಕ್ಕೊಂದು ತಾಕಿದಂತೆ ಇದ್ದರೂ, ಅದರ ಕೇಂದ್ರ ಸ್ಥಳದಿಂದ ಪೊಳ್ಳಿನಾಕಾರದ ಪ್ರದೇಶದಲ್ಲಿ ನಿಂತು ನೋಡಿದರೆ ಕರಿಕಲ್ಲಿನ ಅಂಚನ್ನು ಹೊಂದಿರುವ ಆಕಾಶ ಸ್ಪಷ್ಟವಾಗಿ ಗೋಚರಿಸುತ್ತದೆ. ಕೊನೆಗೆ ಆ ಪರ್ವತ ರಾಕ್ಷಸನ ಗರ್ಭವನ್ನು ಸೀಳಿಕೊಂಡು ಹೊರಗೆ ಬಂದೆವು.

ಇನ್ನೊಂದು ಪರ್ವತದ ರುದ್ರರಮಣೀಯ ದೃಶ್ಯ ನಮ್ಮ ಕಣ್ಣಿಗೆ ಔತಣವೇರ್ಪಡಿಸಿತ್ತು. ಎರಡು ಪರ್ವತಗಳಿಗಿರುವ ಅಂತರ ಸುಮಾರು 50 ಮೀಟರುಗಳು ಇರಬಹುದು. ಎರಡನೆಯ ಪರ್ವತದ ಎರಡೂ ಬದಿಗಳನ್ನು ನೋಡಲು ಅನುಕೂಲವಾಗುವಂತೆ ಚಿಕ್ಕದಾದ ಇಕ್ಕಟ್ಟಾದ ದಾರಿಯೊಂದಿದೆ. ಆ ದಾರಿಯೊಂದಿಗೆ ಅಂಟಿಕೊಂಡು 100-150 ಮೀ ಕೆಳಗಡೆ ಇಳಿದುಕೊಂಡು ಹೋಗಿ, ಪರ್ವತಗಳ ಪಾದಗಳಿಗಿಂತಲೂ ಕೆಳಗೆ, ಇನ್ನೂ ಕೆಳಗೆ ಇಳಿದು ಹೋದೆವು. ಅಲ್ಲಿ ಭೋರ್ಗರೆಯುತ್ತಾ ಹರಿಯುತ್ತಿದ್ದ ನೀರಿನಲ್ಲಿ ಸರಸವಾಡಿ ಮತ್ತೆ ಆ ಕಡಿದಾದ ದಾರಿಯಲ್ಲಿ ಉಬ್ಬಸದಿಂದ, ಆಯಾಸದಿಂದ ಹೇಗೋ ಹತ್ತಿ ಮತ್ತೆ ಆ ಪರ್ವತದ ಬುಡಕ್ಕೆ ಬಂದೆವು. ಅಲ್ಲಿಂದ ಮತ್ತೆ van ಇದ್ದ ಸ್ಥಳಕ್ಕೆ ಹೋಗಲು ಬಂದ ದಾರಿಯಲ್ಲಿಯೇ 4 ಕಿ.ಮೀ ಹೋಗಬೇಕಾಗಿತ್ತು.

– **ವೆಂಕಟೇಶ್ ಬಿ.**, ಉ.ಪ್ರ.ವ್ಯ (ಗು.ಫ್ರ ಮತ್ತು ಸು), ಬೆವಿಕಂ.

# ಬೆಸ್ಕಾಂನಿಂದ ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆ

ಬೆಸ್ಕಾಂ ಇತಿಹಾಸದಲ್ಲೇ ಮೊದಲ ಬಾರಿಗೆ 67 ನೇ ಕನ್ನಡ ರಾಜ್ಯೋತ್ಸವವನ್ನು ಬೆಸ್ಕಾಂ ನಿಗಮ ಕಾರ್ಯಾಲಯ ಆವರಣದಲ್ಲಿ ಬುಧವಾರ (ನವೆಂಬರ್ 30) ಅದ್ದೂರಿಯಾಗಿ ಆಚರಿಸಲಾಯಿತು.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ **ಡಾ.ಸಿ.ಸೋಮಶೇಖರ್,** ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಮಹಾಂತೇಶ ಬೀಳಗಿ,** ಬೆಸ್ಕಾಂನ ನಿರ್ದೇಶಕರು (ತಾಂತ್ರಿಕ) ರಾದ **ಶ್ರೀ ಡಿ.ನಾಗಾರ್ಜುನ,** ನಿರ್ದೇಶಕರು (ಹಣಕಾಸು) ರಾದ **ಶ್ರೀ ದರ್ಶನ್** ಹಾಗು ಹಿರಿಯ ಅಧಿಕಾರಿಗಳು ಹಾಜರಿದ್ದರು. ಬೆಸ್ಕಾಂ ಸಿಬ್ಬಂದಿಗಳಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.





## ಸಂಪಾದಕೀಯ



ಬೆಸ್ಕಾಂನ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರು (ತಾಂತ್ರಿಕ) ರವರುಗಳ ನಿರ್ದೇಶನದಂತೆ ನವೆಂಬರ್–2022 ಮಾಹೆಯಲ್ಲಿ ವಿದ್ಯುತ್ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಬೆಸ್ಕಾಂನ ವಿಭಾಗ ಕಚೇರಿಗಳಲ್ಲಿ ನಡೆದ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳಲ್ಲಿ ಬೆಸ್ಕಾಂ ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕರ್ತವ್ಯದಲ್ಲಿರುವ ಸಂದರ್ಭದಲ್ಲಿ ಅನುಸರಿಸಬೇಕಾದ ಸುರಕ್ಷತಾ ಸಾಧನಗಳ ಬಳಕೆ ಕುರಿತು ಮಾಹಿತಿ ಪಡೆದರು. ಪವರ್ ಮೆನ್‌ಗಳು ಅತೀ ಆತ್ಮವಿಶ್ವಾಸದಿಂದ (Over confidence) ಸಂಭವಿಸಬಹುದಾದ ವಿದ್ಯುತ್ ಅವಘಡಗಳಿಗೆ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಕುರಿತು ಹಿರಿಯ ಅಧಿಕಾರಿಗಳು ಮಾಹಿತಿ ಒದಗಿಸಿದರು.

ಇತ್ತೀಚಿನ ದಿನಗಳಲ್ಲಿ ಇಲಾಖೇತರ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಅಪಘಾತ ತಡೆಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸವನ್ನು ನಮ್ಮ ಸಿಬ್ಬಂದಿ ಮಾಡಬೇಕಾಗಿದೆ. ಅಪಘಾತಗಳಿಂದ ಬೆಸ್ಕಾಂ ವರ್ಚಸ್ಸಿಗೆ ಧಕ್ಕೆ ಆಗುತ್ತಿರುವುದನ್ನು ಮನಗಂಡು ಇಲಾಖೇತರ ಅಪಘಾತಗಳ ತಡೆಗೆ ನಾವು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅಪಘಾತಗಳ ತಡೆಗೆ ಕಾಲಕಾಲಕ್ಕೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಆಗುತ್ತಿದ್ದರೂ, ಅಲ್ಲೊಂದು–ಇಲ್ಲೊಂದು ಅಪಘಾತಗಳು ಸಂಭವಿಸುತ್ತಿರುತ್ತವೆ. ಸಹಾಯವಾಣಿ 1912 ಅಥವಾ ತಮ್ಮ ಉಪವಿಭಾಗಕ್ಕೆ ಗ್ರಾಹಕರಿಂದ ಸುರಕ್ಷತೆ ಕುರಿತಂತೆ ಬರುವ ದೂರುಗಳನ್ನು ಆದ್ಯತೆ ಮೇರೆಗೆ ಬಗೆಹರಿಸಬೇಕು ಹಾಗೂ ಅಪಘಾತಗಳನ್ನು ತಡೆಯುವುದು ಅತ್ಯಗತ್ಯವಾಗಿದೆ.

**ಎಸ್.ಆರ್.ನಾಗರಾಜ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆವಿಕಂ.




# ವಿದ್ಯುತ್ ಸಂಬಂಧಿತ ದೂರುಗಳಿಗೆ ಬೆಸ್ಕಾಂ WHATSAPP ಸಹಾಯವಾಣಿ



**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು

## "ವಾಟ್ಸ್‌ಆ್ಯಪ್" ಸಹಾಯವಾಣಿ ವಿವರ

### ಬೆಂಗಳೂರು ನಗರ ಜಿಲ್ಲೆ

| | |
|---|---|
| ದಕ್ಷಿಣ ವೃತ್ತ | : 82778 84011 |
| ಪಶ್ಚಿಮ ವೃತ್ತ | : 82778 84012 |
| ಪೂರ್ವ ವೃತ್ತ | : 82778 84013 |
| ಉತ್ತರ ವೃತ್ತ | : 82778 84014 |
| ಕೋಲಾರ | : 82778 84015 |
| ಚಿಕ್ಕಬಳ್ಳಾಪುರ | : 82778 84016 |
| ಬೆಂ. ಗ್ರಾಮಾಂತರ | : 82778 84017 |
| ರಾಮನಗರ | : 82778 84018 |
| ತುಮಕೂರು | : 82778 84019 |
| ಚಿತ್ರದುರ್ಗ | : 82778 84020 |
| ದಾವಣಗೆರೆ | : 82778 84021 |



ಸನ್ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ಅವರು ಬೆಸ್ಕಾಂ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿರುವುದು.

## 24/7 ಸಹಾಯವಾಣಿ – 1912

BESCOM | @NammaBescom | Nammabescom | helpline@bescom.co.in helplinebescom@gmail.com
Registration of online complaints – www.bescom.ipgrs.com | Bescom Mitra Mobile App


## ಸಂಪಾದಕ ಮಂಡಳ

| | |
|---|---|
| **ಶ್ರೀ ಮಹಾಂತೇಶ ಬೀಳಗಿ**, ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ದರ್ಶನ್ ಜೆ.**, ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಡಿ. ನಾಗಾರ್ಜುನ**, ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ನಾಗರಾಜ ಎಸ್.ಆರ್.**, ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಡಾ. ಬಿ. ಅರವಿಂದ ಶೆಟ್ಟಿ**, ಸಾರ್ವಜನಿಕ ಸಂಪರ್ಕಾಧಿಕಾರಿ | ಸಹ ಸಂಪಾದಕರು |
| **ಶ್ರೀ ಇಂ. ಟಿ.ಎನ್.ಸುಧಾಕರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ.ಬಲರಾಮ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಇಂ. ರವೀಂದ್ರ**, ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಇಂ. ಮನೋಜ್‌ಕುಮಾರ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**
ಇ-ಮೇಲ್ ವಿಳಾಸ : gmcr@bescom.co.in

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**
**ಇ-ಮೇಲ್ ವಿಳಾಸ** : helplinebescom@gmail.com **ವೆಬ್‌ಸೈಟ್** : www.bescom.org